O.S.No. 427/2013 DW.1

**ದಿಃ 16-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ.**

12) ರಿ ಸ ನಂಬರ 21 ರ ಜಮೀನಿನಲ್ಲಿ 1) ಲಕ್ಷ್ಮೀಬಾಯಿ 2) ಅಣ್ಣಾಜಿ 3) ಸರ್ಜೆರಾವ ದೇಶಪಾಂಡೆ ರವರಿಗೆ ಒಟ್ಟಾಗಿ 4 ಅಣೆ ಹಿಸ್ಸೆ ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಸದರಿ ಜಮೀನಿನಲ್ಲಿ ಸಂಭಾಜಿ ಮತ್ತು ರಾಮಚಂದ್ರರವರಿಗೆ ಒಟ್ಟಾಗಿ 4 ಅಣೆ ಹಿಸ್ಸೆ ಇತ್ತು ಎಂದರೆ ಸರಿಯಲ್ಲ. ಅದರಂತೆ ಅನಂತ ದೇಶಪಾಂಡೆ ರವರಿಗೂ ಸಹ 4 ಅಣೆ ಹಿಸ್ಸೆ ಇತ್ತು ಎಂದರೆ ಸರಿಯಲ್ಲ. ಅದರಂತೆ ಗಣೇಶ ಸಂಭಾಜಿ ದೇಶಪಾಂಡೆ , ಮಂಜುಳಾಬಾಯಿ ಸರ್ಜೆರಾವ ದೇಶಪಾಂಡೆ ಅ.ಸ.ದಾರ ತಾಯಿ ಛಾಯಾಬಾಯಿ ರವರಿಗೂ ಸಹ ಒಟ್ಟಾಗಿ 4 ಅಣೆ ಹಿಸ್ಸೆ ಇತ್ತು ಎಂದರೆ ಸರಿಯಲ್ಲ.

13) ನಾನು ಗೋಪಾಲ ರಂಗರಾವ ದೇಶಪಾಂಡೆ ರವರ ಕಡೆಯಿಂದ 5 ಎಕರೆ 8 ಗುಂಟೆ ಜಮೀನು ಖರೀದಿ ಮಾಡಿರುತ್ತೇನೆ. ಸದರಿ ಗೋಪಾಲ ರಂಗರಾವ ದೇಶಪಾಂಡೆ ರವರಿಗೆ 5 ಎಕರೆ 8 ಗುಂಟೆ ಜಮೀನು ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಶಾಮಾಜಿ ಗಣೇಶ ದೇಶಪಾಂಡೆ ರವರ ಆಸ್ತಿಗೆ ಗೋಪಾಲ ರಂಗರಾವ ದೇಶಪಾಂಡೆ ರವರು ಹೆಸರು ಹಚ್ಚಿಕೊಂಡಿದ್ದರು ಎಂದರೆ ಸರಿ. ಹಾಗೆ ಹೆಸರನ್ನು ವರದಿ ಆಧಾರದ ಮೇಲಿಂದ ಹಚ್ಚಿ ಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಶಾಮಾಜಿ ಗಣೇಶ ದೇಶಪಾಂಡೆ ರವರ ಆಸ್ತಿಯನ್ನು ಗೋಪಾಲ ರಂಗರಾವ ದೇಶಪಾಂಡೆ ರವರು ತಮ್ಮ ಹೆಸರಿಗೆ

ನ್ಯಾಯಾಲಯದ ಡಿಕ್ರಿಯಿಂದಾಗಲೀ , ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿನ ನೋಂದಾಯಿತ ದಾಖಲೆಯಿಂದ ಆಗಲೀ  ಹೆಸರು ಹಚ್ಚಿ ಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ವಾರಸಾ ನಾತೆಯಿಂದ ಹೆಸರು ಹಚ್ಚಿ ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಶಾಮಾಜಿ ತಂದೆಯ ಹೆಸರು ಗಣೇಶ ದೇಶಪಾಂಡೆ ಇರುತ್ತದೆ ಎಂದರೆ ಸರಿ. ಅದರಂತೆ ಗೋಪಾಲನ ತಂದೆಯ ಹೆಸರು ರಂಗರಾವ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಗೋಪಾಲ ರಂಗರಾವ ದೇಶಪಾಂಡೆರವರು ಶಾಮಾಜಿ ಗಣೇಶ ದೇಶಪಾಂಡೆರವರ ದತ್ತಕ ಮಗನಾಗಿದ್ದಾ ಎಂದು ನುಡಿಯುತ್ತಾರೆ. ಅಂತಹ ದತ್ತಕ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.